ಶ್ರೀ ಬಿ. ಬಿ. ಚಿಮ್ಮನಕಟ್ಟಿ : ನಾವು ಟೈಂ ಕೇಳಿದ್ದೇವೆ, ಉತ್ತರ ತರಿಸಿಕೊಡುತ್ತೇವೆ.

ಅಧ್ಯಕ್ಷರು : ಮುಂದಿನ ವಾರ ತರಿಸಿಕೊಡುತ್ತೀರಾ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಕೊಡುತ್ತೇವೆ.

ಪ್ರಶ್ನೋತ್ತರ

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಗಂಗಾ ಕಲ್ಯಾಣ ಯೋಜನೆ

257 (2658) : ಶ್ರೀ ಸಿಂಧ್ಯ ಪಿ. ಜಿ. ಆರ್. (ಕನಕಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ : ವರ್ಗಗಳ ರೈತರಿಗೆ ಗಂಗಾ ಕಲ್ಯಾಣ ಯೋಜನೆಯಡಿ ತೆಗೆದುಕೊಂಡಿರುವ ಯೋಜನೆಗಳ ಸಂಖ್ಯೆ ಎಷ್ಟು; ಯಾವುವು; ಜಿಲ್ಲಾವಾರು ವಿವರಗಳನ್ನು ನೀಡುವುದು (ಪರಿಶಿಷ್ಟ ಜಾತಿ : ವರ್ಗಗಳ ಅಭಿವೃದ್ಧಿ ನಿಗಮದಿಂದ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ನೇರವಾಗಿ ತೆಗೆದುಕೊಂಡಿರುವ ಕಾರ್ಯಕ್ರಮಗಳು)

(ಆ) ಈ ಕಾರ್ಯಕ್ರಮಗಳು ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ತೆಗೆದುಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಮತಿಯಿಂದ ರಾಜ್ಯದಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ರೈತರಿಗೆ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಯ 4893 ಯೋಜನೆಗಳನ್ನು ಹಾಗೂ 192 ಏತ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

(ಆ) ಇಲ್ಲ

(ಇ) ಉದ್ಭವಿಸುವುದಿಲ್ಲ

ಅನುಬಂಧ

ಕ್ರ. ಸಂ.	ಜಿಲ್ಲೆ	ಗಂಗಾ ಕಲ್ಯಾಣ ಯೋಜನೆಯ ಯೋಜನೆಗಳ ಸಂಖ್ಯೆ	ಏತನೀರಾವರಿ ಯೋಜನೆಯ ಘಟಕಗಳು
1	2	3	4
1.	ಬೆಂಗಳೂರು ನಗರ	38	
2.	ಬೆಂಗಳೂರು (ಗ್ರಾ)	216	
3.	ಕೋಲಾರ	328	
1	2	3	4
4.	ಚಿತ್ರದುರ್ಗ	234	
5.	ದಾವಣಗೆರೆ	201	
6.	ತುಮಕೂರು	307	
7.	ಶಿವಮೊಗ್ಗ	189	02
8.	ಮಂಡ್ಯ	180	
9.	ಮೈಸೂರು	152	
10.	ಚಾಮರಾಜನಗರ	164	
11.	ಮಡಿಕೇರಿ	24	
12.	ಮಂಗಳೂರು	03	
13.	ಉಡುಪಿ	01	01
14.	ಚಿಕ್ಕಮಗಳೂರು	245	
15.	ಹಾಸನ	180	
16.	ಕಾರವಾರ	77	
17.	ಧಾರವಾಡ	52	03
18.	ಗದಗ್	102	01
19.	ಹಾವೇರಿ	259	03

1	2	3	4
20.	ಬಿಜಾಪುರ	518	21
21.	ಬಾಗಲಕೋಟೆ	87	13
22.	ಬೆಳಗಾಂ	400	60
23.	ಬೀದರ್	109	
24.	ಬಳ್ಳಾರಿ	116	20
25.	ಗುಲ್ಬರ್ಗಾ	324	26
26.	ಕೊಪ್ಪಳ	346	12
27.	ರಾಯಚೂರು	41	30
		4896	192

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಒಟ್ಟು 4,898 ಕೊಳವೆಬಾವಿಯ ಯೋಜನೆಗಳನ್ನು ತೆಗೆದುಕೊಂಡು ಹಾಗೂ 192 ಏತ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದೆ ಎಂದು ಅಧಿಕಾರಿಗಳು ಕೊಟ್ಟಂತಹ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಈ ಕಾರ್ಯಕ್ರಮ ಮಂದಗತಿಯಿಂದ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ "ಇಲ್ಲ" ಎಂದು ಹೇಳಿದ್ದಾರೆ. ನಾನು ಮಾನ್ಯ ಕಾಗೋಡು ತಿಮ್ಮಪ್ಪನವರಲ್ಲಿ ಕೇಳಿಕೊಳ್ಳುವುದೇನೆಂದರೆ, ಇದು ಸರ್ಕಾರದ ಒಂದು ಕಂಟಿನ್ಯೂಯನ್ ಪ್ರೊಸೆಸ್. ಇದರಲ್ಲಿ ನಮ್ಮ ಸರ್ಕಾರ, ಅವರ ಸರ್ಕಾರ ಎಂದು ಬರುವುದಿಲ್ಲ. 1999ನೇ ಇಸವಿಯಲ್ಲಿ ಸುಮಾರು 15 ರಿಂದ 16 ಜಿಲ್ಲೆಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಥವಾ ಮುಖ್ಯಮಂತ್ರಿಗಳ ಪರವಾಗಿ ಆವತ್ತಿನ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಂತಹ ಮಾನ್ಯ ಪ್ರಕಾಶ್ ಅಥವಾ ನಾನು ಈ ಯೋಜನೆಯನ್ನು ರಿವ್ಯೂ ಮಾಡಿದ್ದೇವೆ. ಅದನ್ನು ತೆಗೆದು ನೋಡಿ. ಎಸ್‌ಸಿ ಎಸ್‌ಟಿ ಕಾರ್ಪೊರೇಷನ್‌ರವರು ಬೋರ್‌ವೆಲ್‌ಗಳನ್ನು ಹಾಕಿ ಐಪಿ ಸೆಟ್‌ಗೆ ಪವರ್ ಕನೆಕ್ಷನ್ ಕೊಡದೇ ಬಾವಿಯಲ್ಲಿ ಇರುವಂತಹ ನೀರು ಇಂಗಿ ಹೋಗುವವರೆಗೂ ಸಹ ಸುಮ್ಮನೆ ಇರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ಎಂದರೆ ಅದಕ್ಕೆ "ಇಲ್ಲ" ಎಂದು ಹೇಳಿದ್ದಾರೆ. ಅದಾದಮೇಲೆ, ಇದನ್ನು ಸರಿಪಡಿಸುವುದಕ್ಕೆ ತೆಗೆದುಕೊಂಡಿರುವ ಕ್ರಮವೇನು ಎಂದು ಕೇಳಿದರೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಅವರು ಏಕೆ ಈ ರೀತಿಯ ಉತ್ತರ ಕೊಟ್ಟರೊ ಅದು ನನಗೆ ಅರ್ಥ ಆಗುವುದಿಲ್ಲ. ಬಹುಶಃ ಅವರು ಉಜ್ಜನಿಗೆ ಹೋದ ಸಂದರ್ಭದಲ್ಲಿ ಫೈಲ್‌ಗೆ ಅಪ್ರೂವ್ ಮಾಡಿದರೋ ಏನೋ ಗೊತ್ತಿಲ್ಲ. I do not expect this kind of an answer from Senior Minister. ನೀವು ಸೋಷಿಯಲ್ ವೆಲ್‌ಫೇರ್ ಮಿನಿಷ್ಟರ್ ಆದಮೇಲೆ ಅನೇಕ ಕಡೆ ಟೂರ್ ಮಾಡಿದ್ದೀರಿ It has come to your notice aslo. ನೀವೇ ಪತ್ರಿಕೆಗಳಲ್ಲಿ ಹೇಳಿದ್ದೀರಾ. ಮತ್ತು ಇವತ್ತು ಉತ್ತರ ಏನು ಕೊಟ್ಟಿದ್ದೀರಿ ಎಂದರೆ

'ಮಂದಗತಿಯಲ್ಲಿ ನಡೆಯುತ್ತಲೇ ಇಲ್ಲ, ನಮ್ಮ ಗಮನಕ್ಕೆ ಬಂದೇ ಇಲ್ಲ' ಎಂದು ಹೇಳಿದ್ದೀರಿ. ಪ್ರಾಮಾಣಿಕವಾಗಿ ಹೇಳಿ ನಿಮ್ಮ ಗಮನಕ್ಕೆ ಬಂದಿಲ್ಲವೆಂದಾದಲ್ಲಿ ನಾನು ಇಲ್ಲಿ ತಟಸ್ಥನಾಗಿ ಕುಳಿತಿರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿ ಕೊಡತಕ್ಕಂಥಾದ್ದು, ಸಿವಿಲ್ ವರ್ಕ್ಸ್ ಮಾಡತಕ್ಕಂಥಾದ್ದು - ಈ ಯೋಜನೆಗಳನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಲು ಎಲ್ಲಾ ಕ್ರಮವನ್ನು ನಾವು ಕೈಗೊಂಡಿದ್ದೇವೆ. ಅದನ್ನು ನಾನು ನಾಲ್ಕು ಸಾರಿ ರಿವ್ಯೂ ಮಾಡಿದ್ದೇನೆ ಮತ್ತು ಸಂಬಂಧಪಟ್ಟವರ ಜೊತೆ ಚರ್ಚೆಯನ್ನು ಸಹ ಮಾಡಿದ್ದೇನೆ. 31-3-1998ರ ತನಕ 5,589 ಕೊಳವೆ ಬಾವಿಗಳಿಗೆ ಪಂಪುಸೆಟ್ಟುಗಳನ್ನು ಅಳವಡಿಸಲಾಗಿತ್ತು. ಆಗಸ್ಟ್ 1999 ರಿಂದ 31-3-2000 ವರೆಗೆ 3,399 ಪಂಪುಸೆಟ್ಟುಗಳಿಗೆ ನಾವು ವರ್ಕ್ ಆರ್ಡರನ್ನು ಕೊಟ್ಟಿದ್ದೇವೆ. ನಿನ್ನೆ ಮೊನ್ನೆ ಕೂಡ ಪಂಪುಸೆಟ್ಟುಗಳನ್ನು ಅಳವಡಿಸತಕ್ಕಂಥ ಕೆಲಸ ಎಲ್ಲಾ ಕಡೆ ನಡೆದಿದೆ. ಇನ್ನು 1498 ಸಿವಿಲ್ ವರ್ಕ್ಸ್‌ನಲ್ಲಿ ಕೆಲವು ಭಾಗ ನಡೆದಿದೆ, ಕೆಲವು ಭಾಗ ಕೆಲಸ ನಡೆಯುತ್ತಿದೆ. ಅದನ್ನು ಮೇ ಅಂತ್ಯದೊಳಗೆ ಪೂರ್ಣಗೊಳಿಸುತ್ತೇವೆ. ಏಕೆಂದರೆ 9317 ಕೊಳವೆ ಬಾವಿಗಳಿಗೆ ಕೆ. ಇ. ಬಿ. ಯಿಂದ ಕನೆಕ್ಷನ್ ಕೊಟ್ಟಿದ್ದೇವೆ. ಇವುಗಳನ್ನೆಲ್ಲ ಮೇ ತಿಂಗಳ ಅಂತ್ಯದೊಳಗೆ ಪೂರ್ಣ ಮಾಡಿಸಬೇಕು ಎನ್ನುವುದರಲ್ಲಿ ತಮಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ನಮಗೆ ಕೂಡ ಇದೆ. ಕಾರಣ ಏನೆಂದರೆ ಈ ವರ್ಗದ ಜನರಿಗಾಗಿ ಅಪಾರವಾದಂಥ ಹಣವನ್ನು ವೆಚ್ಚ ಮಾಡಿದ್ದೇವೆ. ಅದರಿಂದ ಬರತಕ್ಕಂಥ ಪ್ರತಿಫಲ ಅವರಿಗೆ ಸರಿಯಾಗಿ ಸಿಕ್ಕದೇ ಹೋದರೆ ಬಹಳ ತಪ್ಪನ್ನು ಮಾಡುವಂಥ ಒಂದೇ ಕಾರಣಕ್ಕೆ ನಾನು ಎಲ್ಲಾ ರೀತಿಯ ಆಸಕ್ತಿಯನ್ನು ವಹಿಸಿದ್ದೇನೆ. ಇದರಲ್ಲಿ ಯಾವುದೇ ರೀತಿಯ ಕೊರತೆಯನ್ನು ಸರ್ಕಾರ ಮಾಡಿದೆ ಎಂದು ದಯವಿಟ್ಟು ತಾವು ಭಾವಿಸಬೇಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೆ ಇರತಕ್ಕಂಥ ಕಮಿಟ್‌ಮೆಂಟ್ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ತಾವೇ ಹೇಳಿದ ಹಾಗೆ 1998 ರಿಂದ 31-3-2000 ವರೆಗೆ 3399 ಐ. ಪಿ. ಸೆಟ್ಟುಗಳನ್ನು 2 ವರ್ಷದಲ್ಲಿ ಅಳವಡಿಸಿದ್ದಾರೆ. ಸಿವಿಲ್ ವರ್ಕ್ಸ್ ಕಂಪ್ಲೀಟ್ ಆಗಿಲ್ಲ; ಪವರ್ ಕನೆಕ್ಷನ್ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಆದರೆ ಇದು ಮಂದಗತಿಯಲ್ಲಿ ನಡೆಯುತ್ತಿಲ್ಲ ಎಂದು ಹೇಳುತ್ತಾರೆ. This is a certificate given by the Hon'ble Minister to the Scheduled caste / Scheduled Tribe, Development Corporation. ಅಲ್ಲಿರತಕ್ಕಂಥ ಜನರಲ್ ಮ್ಯಾನೇಜರನ್ನು ಸಸ್ಪೆಂಡ್ ಮಾಡಿದ್ದರು. ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧ ಸಾರಿರತಕ್ಕಂಥವರು 15 ದಿವಸದಲ್ಲಿ ಯಾರು ಶಿಫಾರಸ್ಸು ಮಾಡಿದರೋ ಏನೋ ಗೊತ್ತಿಲ್ಲ, ಅದನ್ನು ಪುನಃ ರಿವೋಕ್ ಮಾಡಿಬಿಟ್ಟರು. ಎಸ್. ಸಿ / ಎಸ್. ಟಿ. ಕಾರ್ಪೊರೇಷನ್‌ನಲ್ಲಿ ಬಡವರಿಗೆ ಕೊಡತಕ್ಕಂಥ ಗಂಗಾ ಕಲ್ಯಾಣ ಯೋಜನೆಯನ್ನು ಈ ಅಧಿಕಾರಿಗಳು ಪೂರ್ಣವಾಗಿ ಫೈಲ್ಯೂರ್ ಮಾಡಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಬಿಟ್ಟು ಯಾರೋ ಒಬ್ಬರು ಸೆಕ್ರೆಟರಿ ಬರೆದಿರತಕ್ಕಂಥದ್ದನ್ನು ನಿಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿದರೆ ಹೇಗೆ ಸ್ವಾಮಿ? ದಯಮಾಡಿ ಈ ತರಹದ ಉತ್ತರವನ್ನು ವಾಪಾಸ್ಸು ತೆಗೆದುಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ : ಉತ್ತರವನ್ನು ಏಕೆ ವಾಪಾಸ್ಸು ತೆಗೆದುಕೊಳ್ಳಬೇಕು?

ಶ್ರೀ ಪಿ. ಜಿ. ಆರ್. ಸಿಂಧ್ಯ : ಏಕೆ ಅಂದರೆ ನಾವು ರಿವ್ಯೂ ಮಾಡಿದ್ದೇವೆ ಸ್ವಾಮಿ?.....

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, 31-3-1998ರ ವರೆಗೆ ಒಟ್ಟು 9,509 ಬೋರ್‌ವೆಲ್‌ಗಳು.

ಶ್ರೀ ಪಿ. ಜಿ. ಆರ್. ಸಿಂಧ್ಯ : ಅದು ಎಸ್. ಸಿ. ಎಸ್. ಟಿ. ಕಾರ್ಪೊರೇಷನ್ ಹುಟ್ಟಿದಾಗಿನಿಂದ ಇದೆ. ಅದನ್ನು ಬಿಟ್ಟುಬಿಡಿ.

ಶ್ರೀ ಕಾಗೋಡು ತಿಮ್ಮಪ್ಪ : 31-3-1998ರ ವರೆಗೆ 5989 ಆಗಿದೆ. ಏಪ್ರಿಲ್ 1998 ರಿಂದ ಆಗಸ್ಟ್ 1999 ರ ವರೆಗೆ ಯಾವುದೇ ಪಂಪುಸೆಟ್ಟುಗಳನ್ನು ಅಳವಡಿಸಿರಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾದ ಮೇಲೆ 3399 ಕೊಳವೆ ಬಾವಿಗಳಿಗೆ ಪಂಪುಸೆಟ್ಟುಗಳನ್ನು ಅಳವಡಿಸಿದ್ದೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಸಿವಿಲ್ ವರ್ಕ್ಸ್ ಮಾಡದೆಯೇ ಪಂಪುಸೆಟ್ಟುಗಳನ್ನು ಅಳವಡಿಸುವುದು ಅಂದರೆ ಏನರ್ಥ?

ಶ್ರೀ ಕಾಗೋಡು ತಿಮ್ಮಪ್ಪ : ದಯಮಾಡಿ ಸ್ವಲ್ಪ ಹೇಳುವುದನ್ನು ಕೇಳಿ. ಇವೆಲ್ಲವಕ್ಕೂ ಕೂಡ ಕೆ. ಇ. ಬಿ. ಯಿಂದ ವಿದ್ಯುಚ್ಛಕ್ತಿಯನ್ನು ಕೊಟ್ಟಿದಾರೆ. ಸಿವಿಲ್ ವರ್ಕ್ಸ್ ಆಗಬೇಕಾಗಿತ್ತು. ಸಿವಿಲ್ ವರ್ಕ್ಸ್ ಮಾಡಿಸುವುದಕ್ಕೋಸ್ಕರ 13 ಜಿಲ್ಲೆಗಳನ್ನು ಜಿಲ್ಲಾ ಪಂಚಾಯತಿಗೆ ನಾವು ಕೆ ಟ್ಟಿದ್ದೇವೆ. ಎಲ್ಲಾ ಜಿಲ್ಲೆಯಲ್ಲೂ ಸಿವಿಲ್ ವರ್ಕ್ಸ್‌ನ್ನು ತೆಗೆದುಕೊಳ್ಳುವುದಕ್ಕೆ ಸಾಕಷ್ಟು ಪ್ರಮಾಣ ಸಿಬ್ಬಂದಿ ನಮ್ಮಲ್ಲಿ ಇಲ್ಲದಿರುವ ಕಾರಣಕ್ಕಾಗಿ ನಾನು ಅಧಿಕಾರ ವಹಿಸಿಕೊಂಡ ಮೇಲೆ 13 ಜಿಲ್ಲೆಗಳನ್ನು ಜಿಲ್ಲಾ ಪಂಚಾಯತಿಗೆ ವಹಿಸಿಕೊಡಲಾಗಿದೆ. ಜಿಲ್ಲಾ ಪಂಚಾಯತ್‌ನವರು 2 ತಿಂಗಳ ಕಾಲ ವಹಿಸಿಕೊಂಡು ಅವರು ಏನೂ ಕೆಲಸ ಮಾಡದಿರುವುದರಿಂದ, ಒಂದು ತಿಂಗಳ ಹಿಂದೆ ಅವರಿಂದ ಸಿವಿಲ್ ವರ್ಕ್ಸ್‌ನ್ನು ವಾಪಸ್ಸು ತೆಗೆದುಕೊಂಡು ನಾವೇ ಕಾರ್ಪೊರೇಷನ್ ವತಿಯಿಂದ ಸಿವಿಲ್ ವರ್ಕ್ಸ್‌ನ್ನು ಮಾಡಿಸುತ್ತಿದ್ದೇವೆ. ಆ ಕಾರಣಕ್ಕಾಗಿ ಸ್ವಲ್ಪ ವಿಳಂಬವಾಯಿತು.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮತ್ತೆ ಈ ಉತ್ತರವನ್ನು ಮಾನ್ಯ ಮಂತ್ರಿಗಳು ಹೇಗೆ ಹೇಳಿದರು? ಈ ಕಾರ್ಯಕ್ರಮಗಳು ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಪ್ರಶ್ನೆಯನ್ನು ಕೇಳಿದೆ. 'ಬಂದಿಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಬರದೇ ಇವೆಲ್ಲ ಏಕೆ ನೀವು ಮಾಡಿದಿರಿ? ನನ್ನ ಎರಡನೇ ಪ್ರಶ್ನೆಗೆ ಏನು ಉತ್ತರ ಕೊಟ್ಟಿದ್ದೀರಿ ಅದನ್ನು ತಡೆ ಹಿಡಿಯಿರಿ. ಅದನ್ನು ತಾವು ಕರೆಕ್ಟ್ ಮಾಡಿಕೊಳ್ಳಿ

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಇನ್ನೂ ಏನಾದರೂ ಮಾಹಿತಿ ಬೇಕಾದರೆ ನಾನು ಕೊಡುತ್ತೇನೆ. ಅದನ್ನು ಹೋಲ್ಡ್ ಅಪ್ ಮಾಡತಕ್ಕಂಥ ಅಗತ್ಯ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಹಾಗಾದರೆ ರಾಜ್ಯದ ಜನತೆಗೆ ಪ್ರಶ್ನೋತ್ತರ ವೇಳೆಯಲ್ಲಿ ಸರಿಯಾದ ಮಾಹಿತಿ ಕೊಡುವುದಿಲ್ಲವೇ ಸ್ವಾಮಿ ನೀವು?

ಶ್ರೀ ಕಾಗೋಡು ತಿಮ್ಮಪ್ಪ : ಕೊಟ್ಟಿಲ್ಲ ಎಂದು ಯಾರು ಹೇಳುತ್ತಾರೆ?

ಶ್ರೀ ಪಿ. ಜಿ. ಆರ್. ಸಿಂಧ್ಯ : 3500 ಪಂಪುಸೆಟ್ಟುಗಳಿಗೆ ವಿದ್ಯುತ್ ಕನೆಕ್ಷನ್ ಕೊಟ್ಟಿಲ್ಲವೆಂದು ನೀವೇ ಹೇಳಿದ್ದೀರಲ್ಲಾ.

ಶ್ರೀ ಕಾಗೋಡು ತಿಮ್ಮಪ್ಪ : ಮಂದಗತಿಯಲ್ಲಿ ಸಿವಿಲ್ ವರ್ಕ್ಸ್ ನಡೆಯುತ್ತಿದ್ದಾಗ ನಿಮ್ಮ ಕಾಲದಲ್ಲಿ ನೀವು ಏನು ಮಾಡುತ್ತಿದ್ದೀರಿ?

ಶ್ರೀ ಪಿ. ಜಿ. ಆರ್. ಸಿಂಧ್ಯ : ನಾವು ಏನು ಮಾಡಿದ್ದೇವೋ ಅದು ಬೇರೆ ಮಾತು.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಸಿವಿಲ್ ವರ್ಕ್ಸ್ ಪ್ರಶ್ನೆ ಅಲ್ಲ, ಇಲ್ಲಿ ಸಿವಿಲ್ ವಾರ್ ಆಗುತ್ತಿದೆ. ತಾವು ಏನಾದರೂ ಮಾಡಿ ಇದನ್ನು ನಿಲ್ಲಿಸಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಸಿವಿಲ್ ವಾರ್‌ಗೂ ನನಗೂ ಸಂಬಂಧವಿಲ್ಲ. ನನಗೆ ಸಂಬಂಧಪಟ್ಟ ವಿಷಯ ಏನೆಂದರೆ ಈ ಸರ್ಕಾರದ ಎಸ್‌ಸಿ : ಎಸ್‌ಟಿ ಕಾರ್ಪೊರೇಷನ್‌ನಿಂದ ಎಸ್‌ಸಿ : ಎಸ್‌ಟಿಗಳ ಮೇಲೆ ಆಗುತ್ತಿರತಕ್ಕಂಥ ದೌರ್ಜನ್ಯಕ್ಕೆ ಇದು ಒಂದು ಉದಾಹರಣೆಯಾಗಿದೆ. I want you to set right the SC / ST Development Corporation under your leadership. ಇದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ಎಲ್ಲದಕ್ಕೂ 'ನೀವು ಮಾಡಲಿಲ್ಲ' ಎಂದು ಹೇಳಿದರೆ, ಅದಕ್ಕೇ ನಾವು 18 ಜನ ಈ ಕಡೆ ಬಂದು ಕುಳಿತಿದ್ದೇವೆ.

ಅಧ್ಯಕ್ಷರು : ಮಿ: ಸಿಂಧ್ಯ ಅವರೆ, ನಿಮ್ಮ ಪ್ರಶ್ನೆಗೆ ಸರಿಯಾಗಿ ಉತ್ತರ ಕೊಟ್ಟಿಲ್ಲ ಎಂದು ನೀವು ಹೇಳುತ್ತಿದ್ದೀರಿ. ಅವರು ಸರಿಯಾದ ಉತ್ತರ ಕೊಟ್ಟಿದ್ದೇವೆಂದು ಹೇಳುತ್ತಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಸಂಬಂಧಪಟ್ಟ ಮಂತ್ರಿಯವರು ಸರಿಯಾದ ಉತ್ತರವನ್ನು ಕೊಟ್ಟಿಲ್ಲ, ಸ್ವಾಮಿ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸಿಂಧ್ಯರವರು ಕೇಳಿದರೆ ಇನ್ನೂ ಬೇಕಾದರೂ ಉತ್ತರ ಕೊಡುತ್ತೇನೆ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ : ನೀವು ಹಿರಿಯ ಸಚಿವರಾಗಿದ್ದೀರಿ, ಹೋರಾಟದ ಹಿನ್ನೆಲೆಯಲ್ಲಿ ಬಂದಿದ್ದೀರಿ. ಬ್ಯುರಾಕ್ರಸಿ ಮಾತನ್ನು ನೀವು ಕೇಳುವುದಕ್ಕೆ ಹೋಗಬೇಡಿ. You must correct them. ಈ ಕಾರ್ಯಕ್ರಮಗಳು ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಕೇಳಿವುದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಬರದೇ ಇರುವುದನ್ನು ಸರಿ ಮಾಡುವುದಕ್ಕೆ ಯಾವ ಕ್ರಮ ತೆಗೆದುಕೊಂಡಿರಿ? Why did you suspend that officer and why did you revoke him?

ಶ್ರೀ ಆರಗ ಜ್ಞಾನೇಂದ್ರ : ಇದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಶಿವಮೊಗ್ಗ ಜಿಲ್ಲೆಗೆ ಸೇರಿದ ಹಾಗೆ ಒಂದು ಪತ್ರ ಇದೆ. 'ಒಂದೇ ಒಂದು ಕೊಳವೆ ಬಾವಿಯನ್ನು ಕೊರೆಯುವುದಕ್ಕೆ ಸಾಧ್ಯವಾಗುತ್ತಿಲ್ಲ, ಯಾವ ಕಂಪನಿಯವರೂ ಮುಂದೆ ಬರಲಿಲ್ಲ' ಎಂದು ಪತ್ರ ಬರೆದಿದ್ದಾರೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಮಂದಗತಿಯಲ್ಲಿ ಸಿವಿಲ್ ವರ್ಕ್ಸ್ ನಡೆಯುತ್ತಿಲ್ಲವೇ ಎಂದು ಕೇಳುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿಯೇ ಕೊಳವೆ ಬಾವಿಯನ್ನು ಕೊರೆಸಿದ್ದಾರೆ. ಅವರಿಗೆ ಇನ್ನೂ ಹಣವನ್ನು ಕೊಟ್ಟಿಲ್ಲ. ಇದಕ್ಕೆ ಮಂದಗತಿಯೆಂದು ಹೇಳುತ್ತಿರೋ ಅಥವಾ ಇನ್ಯಾವ ಗತಿ ಎಂದು ಹೇಳುತ್ತೀರಿ? ಹೇಳಿ ನೋಡೋಣ. ಬಾವಿಗಳನ್ನು ಕೊರೆದಿರತಕ್ಕಂಥವರಿಗೆ ಪೂರ್ತಿ ಹಣ ಪಾವತಿ ಆಗಿದೆಯೇ? ಹಣ ಪಾವತಿ ಆಗದಿದ್ದರೆ ಅದು ನಿಧಾನ ಆಗಿರತಕ್ಕಂಥದ್ದಕ್ಕೆ ಮಂದಗತಿ ಎಂದು ಕರೆಯಬೇಕೇ ಬೇಡವೇ?

ಶ್ರೀ ಕಾಗೋಡು ತಿಮ್ಮಪ್ಪ : ಈ ಪ್ರಕರಣಕ್ಕೆ ಅವರ ಪ್ರಶ್ನೆ ಸೇರಿಸಿಕೊಳ್ಳುವುದಿಲ್ಲ. ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಯಾರ್ಯಾರಿಗೆ ಎಷ್ಟು ಹಣ ಕೊಡಬೇಕಾಗಿದೆ? ಎಷ್ಟು ಕೊಟ್ಟಿದ್ದೇವೆ, ಎಂಬುದನ್ನು ವಿವರವಾಗಿ ಹೇಳುತ್ತೇನೆ.

ಶ್ರೀ ಸಿ. ಭೈರೇಗೌಡ : ನಮ್ಮ ಕ್ಷೇತ್ರದಲ್ಲಿ ಕೆಲಸ ನಡೆಯುತ್ತಿಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಆಯಿತು, ಈಗ ಹೇಳಿದ್ದೀರಿ. ನಿಮ್ಮ ಊರಿನ ಯಾವ ಸ್ಥಳದಲ್ಲಿ ಎಂದು ಹೇಳಿದರೆ ನಾಳೆಯೇ ಅದು ಆಗಿದೆಯೋ ಇಲ್ಲವೋ ಎನ್ನುವ ವಿಚಾರವನ್ನು ತಮಗೆ ತಿಳಿಸುತ್ತೇನೆ.

ಶ್ರೀ ಸಿ. ಭೈರೇಗೌಡ : ಎಲ್ಲಾ ಕಡೆಯೂ ಇದೇ ರೀತಿ ಮಂದಗತಿಯಲ್ಲಿ ಕೆಲಸಗಳು ನಡೆಯುತ್ತಿವೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಟ್ಟೆ ಅಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈಗ ಇಲ್ಲಿ ಉದಾಹರಣೆಯನ್ನು ಹೇಳುತ್ತಿದ್ದಾರೆ. ನಮ್ಮ ಸರ್ಕಾರ ಬಂದು 6 ತಿಂಗಳಾಯಿತು, ಒಂದು ದಿವಸವಾದರೂ ಈ ವಿಚಾರದಲ್ಲಿ ನನಗೆ ಹೇಳಿದ್ದಾರೆಯೇ? ಎಂದು ಅವರನ್ನು ಕೇಳಿ.

ಶ್ರೀ ಸಿ. ಭೈರೇಗೌಡ : ಅವರು ಹೇಳದಿರುವುದರಿಂದ ಅದನ್ನು ಮಾಡಿಸುವುದು ನನ್ನ ಕೆಲಸ ಅಲ್ಲ ಎಂದು ಹೇಳಿಬಿಡಲಿ.

ಶ್ರೀ ಕಾಗೋಡು ತಿಮ್ಮಪ್ಪ : ಯಾರು ಹೇಳದಿದ್ದರೂ ನನ್ನ ಕೆಲಸವನ್ನು ನಾನು ಮಾಡಿಯೇ ಮಾಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ವಿಧಾನ ಸಭೆ ಅಧಿವೇಶನದಲ್ಲಿ ಎಲ್ಲಾ ವಿಷಯವನ್ನೂ ನಿಮ್ಮ ಗಮನಕ್ಕೆ ತರುವುದಕ್ಕೆ ಆಗುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈಗ ಅವರು ಈ ವಿಚಾರವನ್ನು ಹೇಳಿದ್ದಾರೆ. ನಾನು ವೆರಿಫೈ ಮಾಡುತ್ತೇನೆ. ಅವರು ಹೇಳಿರುವುದು ನಿಜವಾಗಿದ್ದರೆ ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡುತ್ತೇನೆ.

ಶ್ರೀ ಸಿ. ಭೈರೇಗೌಡ : ಈಗಲಾದರೂ ಮಂದಗತಿಯಲ್ಲಿ ನಡೆಯುತ್ತಿರತಕ್ಕಂಥದ್ದು ಅರ್ಥ ಆಯಿತಲ್ಲವೇ? ಇನ್ನು ಮುಂದಾದರೂ ವೇಗವಾಗಿ ಸಿವಿಲ್ ವರ್ಕ್ಸ್ ಮುಂತಾದವನ್ನು ಮಾಡಿ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದ ಪ್ರಶ್ನೆಯನ್ನು ಮಾನ್ಯ ಸಿಂಧ್ಯಾ ಅವರು ಕೇಳಿದ್ದಾರೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮದಿಂದ ಕೊರೆಯುವಂಥ ಕೊಳವೆ ಬಾವಿಗಳು ನಮ್ಮ ಜಿಲ್ಲೆಯ 3 ತಾಲ್ಲೂಕುಗಳಲ್ಲಿ ಕೊಳವೆ ಬಾವಿ ಕೊರೆಯುವುದಕ್ಕೆ ಯಾವ ಕಂಪನಿಗಳೂ ಮುಂದೆ ಬರುತ್ತಿಲ್ಲವೆಂದು ಬೆಂಗಳೂರಿನ ಕೇಂದ್ರ ಕಛೇರಿಗೆ ಶಿವಮೊಗ್ಗ ಕಛೇರಿಯವರು ಪತ್ರ ಬರೆದಿದ್ದಾರೆ. ಸಾಗರ, ತೀರ್ಥಹಳ್ಳಿ ಇಂಥ ಮಲೆನಾಡು ಏರಿಯಾಗಳಲ್ಲಿ ನೀರು ಬರಲಿಲ್ಲವೆಂದು ಹೇಳಿ ಓಪನ್ - ವೆಲ್ ಮಾಡಲಿಕ್ಕೆ ಅವಕಾಶ ಕೊಡಿ ಎಂದು ಕೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ : ಒಂದು ಜಿಲ್ಲೆಗೆ ಇಷ್ಟು ಕೊಳವೆ ಬಾವಿಗಳನ್ನು ಕೊರೆಯಬೇಕೆಂದು ಗುರಿಯನ್ನು ನಿರ್ಧಾರ ಮಾಡಿಬಿಡುತ್ತಾರೆ. ಆ ಜಿಲ್ಲೆಯಲ್ಲಿ ಕೆಲವು ತಾಲ್ಲೂಕಗಳ ಕೊಳವೆ ಬಾವಿಗಳು ಯಶಸ್ವಿಯಾಗುತ್ತವೆ, ಕೆಲವು ತಾಲ್ಲೂಕುಗಳಲ್ಲಿ ಆಗುವುದಿಲ್ಲ. ಸಾಗರ, ತೀರ್ಥಹಳ್ಳಿ ಮತ್ತು ಭದ್ರಾವತಿ ಈ ಮೂರು ತಾಲ್ಲೂಕುಗಳಲ್ಲಿ ಮಾತ್ರ ಕೊಳವೆ ಬಾವಿಗಳನ್ನು ಕೊರೆದಿಲ್ಲ. ಕಾರಣ ಏನೆಂದರೆ ಜಿಲ್ಲೆಗೆ ಇಷ್ಟು ಎಂದು ನಿರ್ಧಾರ ಮಾಡಿದ್ದರಿಂದ ತಾಲ್ಲೂಕುವೈಸ್ ಅದನ್ನು ಮಾಡಲಿಲ್ಲ. ಜಿಲ್ಲಾಧಿಕಾರಿಗಳು ಇದಕ್ಕೆ ಅಧ್ಯಕ್ಷರಾಗಿದ್ದರು, ಫಲಾನುಭವಿಗಳನ್ನು ಗುರುತಿಸತಕ್ಕಂಥ ಕೆಲಸವನ್ನು ಅವರೇ ಮಾಡುತ್ತಿದ್ದರು, ಎಲ್ಲೆಲ್ಲಿ ಫೀಸಿಬಿಲಿಟಿ ಬರುತ್ತದೋ ಅಲ್ಲಿ ಕೊಳವೆ ಬಾವಿಯನ್ನು ತೆಗೆಯುತ್ತಾರೆ. ಇಂಥ ಕಡೆ ಹೋಗಲಿಲ್ಲ. ಆ ಕಾರಣಕ್ಕಾಗಿ ಸಾಗರ, ತೀರ್ಥಹಳ್ಳಿ ಅಷ್ಟೇ ತಾಲ್ಲೂಕುಗಳು ಅಲ್ಲ, ಇಂಥ ಅನೇಕ ತಾಲ್ಲೂಕುಗಳಲ್ಲಿ ಒಂದೂ ಕೂಡ ಕೊಳವೆ ಬಾವಿಯನ್ನು ಕೊರೆಯದಿರತಕ್ಕಂಥ ಪ್ರಸಂಗ ಇರುವುದರಿಂದ ನಾನು ಅಧಿಕಾರಕ್ಕೆ ಬಂದ ಮೇಲೆ ಒಂದು ತಾಲ್ಲೂಕಿಗೆ ಒಂದು ಕೊಡಲಿ ಅಥವಾ ಎರಡು ಕೊಡಲಿ ಪ್ರತಿಯೊಂದು ಅಸೆಂಬ್ಲಿ ಸೆಗ್‌ಮೆಂಟ್‌ಗೂ ಹೋಗುವ ರೀತಿಯಲ್ಲಿ ನಾನು ಆಗಲೇ ತೀರ್ಮಾನವನ್ನು ಕೈಗೊಂಡಿದ್ದೇನೆ.

11.00 ಎ. ಎಂ

ಇದರ ಜೊತೆಗೆ ಮಲೆನಾಡಿನ ಪ್ರದೇಶಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಹಾಗೂ ಬೆಳಗಾವಿಯ ಕೆಲವು ಭಾಗಗಳಲ್ಲಿ ನದಿಯ ಪಕ್ಕದಲ್ಲಿ ಜಾಕ್‌ವೆಲ್ ಹಾಕಿ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಇದೊಂದು ತೆಗೆದುಕೊಂಡಿಲ್ಲದೇ ಇರುವುದರಿಂದ ಓಪನ್‌ವೆಲ್‌ಗೂ ಅವಕಾಶ ಇಟ್ಟು ಈ ಗಂಗಾ ಕಲ್ಯಾಣ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಈಗಾಗಲೇ ತೀರ್ಮಾನಿಸಿದ್ದೇನೆ.

ಅಧ್ಯಕ್ಷರು : ಅದು ಏನಾಗಿದೆ ಎಂಬುದಕ್ಕೆ ಫಾಲೋ ಅಪ್ ಆಕ್ಷನ್ ಇರಬೇಕು.

ಶ್ರೀ ಎ. ನಾರಾಯಣ ಸ್ವಾಮಿ : ಮಾನ್ಯ ಸಿಂಧ್ಯಾರವರ ಪ್ರಶ್ನೆಗನುಗುಣವಾಗಿ ನನ್ನ ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆ ಹಾಗೂ ಇತರೆ ಯೋಜನೆಗಳ ಬಗ್ಗೆ ಕೆಲವು ಮಾಹಿತಿಗಳನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು : ನಾನೀಗಾಗಲೇ ಹೇಳಿದಂತೆ ಪ್ರತಿಯೊಬ್ಬರೂ ಅವರವರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಕೇಳುವುದಾದರೆ, ಸುಮಾರು ಅರ್ಧ ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಬೇಕಾಗುತ್ತದೆ. ಆದ್ದರಿಂದ, ಜನರಲ್ಲಾಗಿ ಪ್ರಶ್ನೆ ಕೇಳಬೇಕು.

ಶ್ರೀ ಎ. ನಾರಾಯಣ ಸ್ವಾಮಿ : ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಹೇಳುವುದೇನೆಂದರೆ, ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಕೊರೆದಿರುವ ಬೋರ್‌ವೆಲ್‌ಗಳಿಗೆ ಸುಮಾರು ಆರು ತಿಂಗಳಾದರೂ ವಿದ್ಯುತ್ ಸಂಪರ್ಕ ಕೊಡುವುದಿಲ್ಲ, ಇನ್ನಾರೂ ತಿಂಗಳಾದ ಮೇಲೆ ಕೊಟ್ಟರೂ ಕೂಡ ಅವರು ಕೊಟ್ಟಿರುವ ಮೋಟರ್ ಏನಿದೆ, ಅದು ಹಾಕಿದಾಗಿನಿಂದ ಸರಿಯಾಗಿ ಕೆಲಸ ಮಾಡದೇ ಹದಿನೈದು ದಿವಸಗಳಲ್ಲಿ ಕೆಟ್ಟು ಹೋಗುತ್ತದೆ. ಇವುಗಳ ನಿರ್ವಹಣೆಗೆಂದೇ ಕೋಟ್ಯಾಂತರ ರೂಪಾಯಿಗಳನ್ನು ಕಾದಿರಿಸಿರುತ್ತಾರೆ. ಈ ಹಣ ಎಲ್ಲಿಗೆ ಹೋಗುತ್ತದೆ? ಇದರ ಬಗ್ಗೆ ಏನಾದರೂ ತನಿಖೆಯಾಗಿದೆಯೇ? ಈ ಹಗರಣದ ಬಗ್ಗೆ ಲೋಕಾಯುಕ್ತದಿಂದ ಧಾಳಿಯಾಗಿ ತನಿಖೆಯಾಗಿ ವರದಿ ಬಂದ ಮೇಲೆ ಮತ್ತೆ ರೀಟೈನ್ ಆಗುವಂಥಾದ್ದು ಏನಿದೆ ಇದು ನನಗೆ ಗೊತ್ತಾಗುತ್ತಿಲ್ಲ. ಆದ್ದರಿಂದ, ಎಸ್‌ಸಿ : ಎಸ್‌ಟಿ ಅಭಿವೃದ್ಧಿ ನಿಗಮದ ಬಗ್ಗೆ ಅರ್ಧ ಗಂಟೆಗಳ ಕಾಲ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿದೆ. ಕೇವಲ ಈ ಯೋಜನೆಯೊಂದೇ ಅಲ್ಲ, ಆ ಇಲಾಖೆಯಲ್ಲಿ ವೆಹಿಕಲ್ ಸಪ್ಲೈ ಮಾಡುವ ಯೋಜನೆಯಲ್ಲೂ ಕೂಡ ಆ ತರಹದ ಹಗರಣ ಇರಬಹುದು. ಏಕೆಂದರೆ, ಯಾವುದೋ ಒಂದು ವೆಹಿಕಲ್ ತರಿಸಿ ಮತ್ತೊಂದು ವೆಹಿಕಲ್ ಕೊಟ್ಟಿದ್ದಕ್ಕೆ ಆರ್. ಟಿ. ಓ. ನವರು ಇದಕ್ಕೆ ಒಪ್ಪಿಗೆ ಕೊಡಲಿಲ್ಲವಾದ್ದರಿಂದ ಅದು ರಿನಿವಲ್ ಕೂಡ ಆಗಲಿಲ್ಲ. ಆದ್ದರಿಂದ, ಇವುಗಳ ಬಗ್ಗೆ ಚರ್ಚೆ ಮಾಡಲು ಅರ್ಧ ಗಂಟೆಗಳ ಕಾಲ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರಲ್ಲಿ ನಾನು ಏಕೆ ಈ ಪ್ರಶ್ನೆಯನ್ನು ಕೇಳಿದೆ ಎಂದರೆ, ನನ್ನ ಉದ್ದೇಶ ಈ ಎಸ್‌ಸಿ : ಎಸ್‌ಟಿ ಗಳಿಗೆ ಎಲ್ಲೋ ಒಂದು ಕಾಡಿನಲ್ಲಿ 'ಸಿ' ಮತ್ತು 'ಡಿ' ಲ್ಯಾಂಡ್ ಸಿಕ್ಕಿರುತ್ತದೆ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ನಾನು ಇಡೀ ರಾಜ್ಯದಲ್ಲಿ 27 ಜಿಲ್ಲೆಗಳಲ್ಲಿ ರಿವ್ಯೂ ಮಾಡಿದ್ದೇನೆ, ಪ್ರತಿಯೊಂದು ಕಡೆಯಲ್ಲೂ ಇವರಿಗೆ ಅನ್ಯಾಯ ಆಗಿದೆ. ಹಾಲಿ ಯಾವುದೇ ಸರ್ಕಾರ ಇರಬಹುದು, ಆದರೆ ಇದು ತಮ್ಮ ಗಮನಕ್ಕೂ ಬಂದಿಲ್ಲವೆಂದರೆ ಏನರ್ಥ? ಈ ಮಾತನ್ನು ತಾವು ಹೇಳಿದ್ದರಿಂದ ನನಗೆ ನೋವಾಯಿತು. ಆದ್ದರಿಂದ, ಇದರ ಬಗ್ಗೆ ಒಂದು ಕಾಲಮಿತಿ ಕೊಟ್ಟು ಎಲ್ಲೆಲ್ಲಿ ಓಪನ್ - ವೆಲ್ ಮಾಡಿಸಬೇಕೋ ಅಲ್ಲಿ ಓಪನ್ - ವೆಲ್ ಮಾಡಿಸಿ, ಎಲ್ಲಿ ಬೋರ್ - ವೆಲ್ ಹಾಕಿಸಬೇಕೋ ಅಲ್ಲಿ ಬೋರ್ - ವೆಲ್ ಹಾಕಿಸಿ. ಇದರ ಬಗ್ಗೆ ಖಚಿತವಾಗಿ ಜನರಲ್ ಆರ್ಡರ್ ಮಾಡಿಬಿಡಿ. ಎಸ್‌ಸಿ : ಎಸ್‌ಟಿ ಗಳವರು ಬೋರ್‌ವೆಲ್ ಹಾಕಿಸಿ ನೀರು ಬಿದ್ದರೆ ಎರಡು ತಿಂಗಳೊಳಗೆ ಕೆ. ಇ. ಬಿ. ಯವರು ಕರೆಂಟ್ ಸಂಪರ್ಕ ಕೊಡಬೇಕೆಂದು ಜನರಲ್ ಆರ್ಡರ್ ಮಾಡಿ. ಇಲ್ಲಿ ಕೆ. ಇ. ಬಿ. ಯವರು ಆದ್ಯತೆ ಕೇಳುತ್ತಿರುವುದರಿಂದ ನಾನು ಇದನ್ನು ಕೇಳಬೇಕಾಯಿತೆ ವಿನಃ ಬೇರೆ ಯಾವ ಉದ್ದೇಶವೂ ಇದರಲ್ಲಿ ಇಲ್ಲ. ಇದಕ್ಕೆ ತಾವು ಒಂದು ಟೈಮ್ ಲಿಮಿಟ್ ಮಾಡುವುದಕ್ಕೆ ಸಾಧ್ಯವೆ?

ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ : ನನ್ನ ಕ್ಷೇತ್ರದಲ್ಲಿ 1997 ರಲ್ಲಿ ಎಸ್‌ಸಿ : ಎಸ್‌ಟಿ ನಿಗಮದವರು ಕೊರೆದಿರುವಂಥ ಬೋರ್‌ಗಳಿಗೆ ಇದುವರೆವಿಗೂ ಕರೆಂಟ್ ಕೊಟ್ಟಿಲ್ಲ..

ಅಧ್ಯಕ್ಷರು : ಈಗಾಗಲೇ ನಾನು ಹೇಳಿದೆ, ಅವರವರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿದರೆ ಬಹಳ ಸಮಯ ಬೇಕಾಗುತ್ತದೆ, ಆದ್ದರಿಂದ ಜನರಲ್ಲಾಗಿ ಕೇಳಿ ಎಂದು ಹೇಳಿದ್ದೇನೆ. ಪ್ರಶ್ನೋತ್ತರದಲ್ಲಿ ಈ ರೀತಿ ಆದರೆ ಆಗುವುದಿಲ್ಲ, ಬೇಕಾದರೆ ಇದರ ಬಗ್ಗೆ ಅರ್ಧ ಗಂಟೆಗಳ ಕಾಲ ಚರ್ಚೆಗೆ ತೆಗೆದುಕೊಳ್ಳೋಣ

ಶ್ರೀ ಕಾಗೋಡು ತಿಮ್ಮಪ್ಪ : ನಾನು ಎಲ್ಲಾ ಶಾಸಕರುಗಳಿಗೆ ಪತ್ರ ಬರೆಯುತ್ತಿದ್ದೇನೆ; ಅವರವರ ಕ್ಷೇತ್ರ ಅಥವಾ ಅವರವರ ತಾಲ್ಲೂಕುಗಳಲ್ಲಿ ಈ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಅದು ವೈಯಕ್ತಿಕ ಯೋಜನೆ ಇರಬಹುದು ಅಥವಾ ಗುಂಪು ಯೋಜನೆಯಿರಬಹುದು, ಒಟ್ಟಾರೆಯಾಗಿ ಮಾಡಿರುವಂಥವುಗಳನ್ನು ನೀವಾಗಲಿ ಅಥವಾ ನಿಮ್ಮ ಜೊತೆಗೆ ತಾಲ್ಲೂಕು ಪಂಚಾಯತಿಯ ಸಿ. ಇ. ಓ. ರವರನ್ನು ಕರೆದುಕೊಂಡು ಹೋಗಿ ಸ್ಥಳ ಪರಿಶೀಲಿಸಿ, ಅವುಗಳು ಯಾವ ರೀತಿ ನಡೆಯುತ್ತಿವೆ? ಆ ಫಲಾನುಭವಿಗಳು ಯಾವ ರೀತಿ ಉಪಯೋಗ ಮಾಡುತ್ತಿದ್ದಾರೆ? ಸರ್ಕಾರದಿಂದ ಇನ್ನೂ ಬೇರೆ ಏನಾದರೂ ಸಹಾಯ ಬೇಕೆ? ಎಂಬುದನ್ನು ಗುರುತಿಸಿ ಅದರ ಬಗ್ಗೆ ನನಗೆ ಪತ್ರ ಬರೆಯಬೇಕು ಎಂದು ತಿಳಿಸಬೇಕೆಂದಿದ್ದೇನೆ ನಾನು ಈಗಾಗಲೇ ಡ್ರಾಫ್ಟ್ ರೆಡಿ ಮಾಡಿದ್ದೇನೆ. ಇದರಲ್ಲಿ ಸಂಪೂರ್ಣವಾದ ಜವಾಬ್ದಾರಿ ನಿಮಗೆ ವಹಿಸಿದ್ದೇನೆ. ಒಂದು ಪಕ್ಷ ತಾವು ನೇರವಾಗಿ ಹೋಗಲಿಕ್ಕೆ ಆಗದೇ ಹೋದರೆ ತಮ್ಮ ಮುಖಾಂತರ ಅಧಿಕಾರಿಗಳನ್ನು ಕಳುಹಿಸಿ ವರದಿ ಪಡೆದುಕೊಂಡು ನನಗೆ ಪತ್ರ ಬರೆಯಬಹುದು. ಈ ರೀತಿ ಕಳುಹಿಸುವಾಗ ನಾನೇ ಖುದ್ದಾಗಿ ಅಲ್ಲಿರುವ ಎಲ್ಲಾ ಲೋಪದೋಷಗಳನ್ನು ಸರಿಪಡಿಸುತ್ತೇನೆ.

ಅಧ್ಯಕ್ಷರು : ತಾವು ಎಲ್ಲಾ ಜಿಲ್ಲೆಗಳಿಂದ ಮಾಹಿತಿ ತರಿಸಿ; ಏಕೆಂದರೆ, ಪ್ರತಿಯೊಬ್ಬರೂ ಅವರವರ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕೇಳುತ್ತಿರುವುದರಿಂದ ಅರ್ಧಗಂಟೆಗಳ ಕಾಲ ಈ ವಿಷಯದಲ್ಲಿ ಚರ್ಚೆಗೆ ನಾನು ಅವಕಾಶ ಮಾಡಿ ಕೊಡುತ್ತೇನೆ.

ಶಿವಮೊಗ್ಗ - ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಖಾಸಗಿಯವರು ಲೇಔಟ್ ಮಾಡಿರುವ ಬಗ್ಗೆ.

258 (2451) : ಶ್ರೀ ಹೆಚ್. ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಶಿವಮೊಗ್ಗ - ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಖಾಸಗಿಯವರು ಯಾರು ಯಾರು ಎಷ್ಟು ಎಕರೆ ಲೇಔಟ್ ಮಾಡಿರುತ್ತಾರೆ;

(ಆ) ಶಿವಮೊಗ್ಗ ನಗರಸಭೆ ಪ್ರತಿ ತಿಂಗಳಿಗೆ ಸಂದಾಯವಾಗುವ ಆದಾಯ ಎಷ್ಟು?

(ಇ) ಶಿವಮೊಗ್ಗ ನಗರಸಭೆಯಲ್ಲಿ ಇರುವ ನೌಕರರ ಸಂಖ್ಯೆ ಎಷ್ಟು?